**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ**
**ಹಗರಿಬೊಮ್ಮನಹಳ್ಳಿ.**

**ಸಿ.ಸಿ.ಸಂಖ್ಯೆಃ 135/2021**

ಪಿರ್ಯಾದುದಾರರು : ರಾಜ್ಯದ ಪರವಾಗಿ ತಂಬ್ರಹಳ್ಳಿ ಪೊಲೀಸ್ ಠಾಣೆ

ವಿರುದ್ಧ

ಆರೋಪಿತರು : 1) ಗುರು ಕೊಟ್ರೇಶ ಬಿನ್ ಭರ್ಮಪ್ಪ ,
ವಯಸುಃ 27 ವರ್ಷ, ವೃತ್ತಿಃ ವ್ಯವಸಾಯ ,
2) ಕೊಟ್ರೇಶ .ಯು. ಬಿನ್ ಭರ್ಮಪ್ಪ.
ವಯಸುಃ 30 ವರ್ಷ, ವೃತ್ತಿಃ ವ್ಯವಸಾಯ ,
3) ದೊಡ್ಡ ಬಸಪ್ಪ ಬಿನ್ ಭರ್ಮಪ್ಪ.
ವಯಸುಃ 21 ವರ್ಷ, ವೃತ್ತಿಃ ವಿದ್ಯಾರ್ಥಿ ,
ಎಲ್ಲಾರೂ ವಾಸಃ ಕೊಡೇನಹಳ್ಳಿ ಗ್ರಾಮ ,
ಹಗರಿಬೊಮ್ಮನಹಳ್ಳಿ ತಾಲ್ಲೂಕು, ವಿಜಯನಗರ ಜಿಲ್ಲೆ .

**ದೋಷಾರೋಪಣೆ**

ಶ್ರೀಮತಿ ಭಾಗ್ಯಲಕ್ಷ್ಮಿ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ಅದ ನಾನು 1 ರಿಂದ 3 ನೇ ಆರೋಪಿತರಾದ ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆಃ

ದಿನಾಂಕಃ 27-11-2020 ರಂದು ಬೆಳಿಗ್ಗೆ 11-45 ಗಂಟೆ ಸುಮಾರಿಗೆ ತಂಬ್ರಹಳ್ಳಿ ಪೊಲೀಸ್ ಠಾಣಾ ಸರಹದ್ದಿನ ಕೊಂಡೇನಹಳ್ಳಿ ಗ್ರಾಮದಲ್ಲಿರುವ ಶ್ರೀ ಆಂಜನೇಯ ದೇವಸ್ಥಾನದ ಬಳಿ ಚಾಸ-1 ರವರು 1 ರಿಂದ 3 ನೇ ಆರೋಪಿತರಾದ ನಿಮಗೆ ಆಸ್ತಿ ವಿಷಯದಲ್ಲಿ ತನ್ನ ದೊಡ್ಡಪ್ಪನಾದ ಬಸವಂತ್ಟನೊಂದಿಗೆ ಜಗಳ ಮಾಡಿಕೊಳ್ಳದೇ, ಸಮಾಧಾನದಿಂದ ಕುಳಿತುಕೊಂಡು ಆಸ್ತಿಯನ್ನು ಹಂಚಿಸಿಕೊಳ್ಳಿ ಎಂದು ಬುದ್ದಿ ಮಾತು ಹೇಳಿದ್ದಕ್ಕೆ 1 ರಿಂದ 3 ನೇ ಆರೋಪಿತರಾದ ನೀವು ಚಾಸಾ-1 ರವರಿಗೆ ಲೇ ಸೂಳೆ ಮಕ್ಕಳಾ, ಮಿಂಡ್ರಿಗುಟ್ಟಿದವರ ನಿಮಗೆ ಏನೂ ಸಂಬಂಧ ಅಂತಾ ಅವಾಚ್ಯಶಬ್ಧಗಳಿಂದ ನಿಂದಿಸಿ", ಉದ್ದೇಶಪೂರ್ವಕವಾಗಿ ಚಾಸಾ-1 ರವರಿಗೆ ಅವಮಾನ ಮಾಡಿ ಶಾಂತಿಭಂಗವುಂಟು ಮಾಡಿದ್ದರಿಂದ, 1 ರಿಂದ 3 ನೇ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ.504 ಸಹವಾಚಕ ಕಲಂ.34 ರ ಅಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ನನ್ನ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

ಎರಡನೆಯದಾಗಿ ಅದೇ ದಿನ, ಸಮಯ ಹಾಗೂ ಸ್ಥಳದಲ್ಲಿ 1 ಮತ್ತು 2 ನೇ ಆರೋಪಿತರಾದ ನೀವು ಏಕೋದ್ದೇಶ ಹೊಂದಿ 1 ನೇ ಆರೋಪಿಯಾದ ನೀವು ಸ್ವ-ಇಚ್ಚೆಯಿಂದ ನಿಮ್ಮ ಬಾಯಿಯಿಂದ ಚಾಸಾ-1 ರವರ ಮೂಗಿಗೆ ಕಚ್ಚಿ ತೀವ್ರವಾಗಿ ಘಾಸಿಗೊಳಿಸಿದ್ದು, ಆದ್ದರಿಂದ 1 ನೇ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ.325 ಸಹವಾಚಕ ಕಲಂ.34 ರ ಅಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ನನ್ನ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

ಮೂರನೆಯದಾಗಿ ಅದೇ ದಿನ, ಸಮಯ ಹಾಗೂ ಸ್ಥಳದಲ್ಲಿ 1 ರಿಂದ 3 ನೇ ಆರೋಪಿತರಾದ ನೀವು ಏಕೋದ್ದೇಶ ಹೊಂದಿ 2 ಮತ್ತು 3 ನೇ ಆರೋಪಿತರಾದ ನೀವು ಸ್ವ-ಇಚ್ಚೆಯಿಂದ ಕಟ್ಟಿಗೆಯನ್ನು ಮಾರಕ ಆಯುಧದಂತೆ ಬಳಸಿ ಅದಂರಿದ ಚಾಸಾ-1 ರವರ ಬಲಗಾಲಿನ ತೊಡೆಗೆ ಮತ್ತು ಬಲಗೈಗೆ ಮುಂಗೈಗೆ ಹೊಡೆದು ತೀವ್ರ ಸ್ವರೂಪದ ರಕ್ತಗಾಯ ಪಡಿಸಿದ್ದು, ಆದ್ದರಿಂದ 2 ಮತ್ತು 3 ನೇ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ.324 ಸಹವಾಚಕ ಕಲಂ.34 ರ ಅಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ನನ್ನ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

ನಾಲ್ಕನೆಯದಾಗಿ ಅದೇ ದಿನ, ಸಮಯ ಹಾಗೂ ಸ್ಥಳದಲ್ಲಿ 1 ರಿಂದ 3 ನೇ ಆರೋಪಿತರಾದ ನೀವು ಏಕೋದ್ದೇಶ ಹೊಂದಿ 2 ಮತ್ತು 3 ನೇ ಆರೋಪಿತರಾದ ನೀವು ಸ್ವ-ಇಚ್ಚೆಯಿಂದ ಚಾಸಾ-1 ರವರಿಗೆ ಹೊಡಿ-ಬಡಿ ಮಾಡಿ ಸಾದಾ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು, ಆದ್ದರಿಂದ 2 ಮತ್ತು 3 ನೇ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ.323 ಸಹವಾಚಕ ಕಲಂ.34 ರ ಅಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ನನ್ನ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

ಐದನೆಯದಾಗಿ ಅದೇ ದಿನ, ಸಮಯ ಹಾಗೂ ಸ್ಥಳದಲ್ಲಿ 1 ರಿಂದ 3 ನೇ ಆರೋಪಿತರಾದ ನೀವು ಏಕೋದ್ದೇಶ ಹೊಂದಿ ಚಾಸಾ-1 ರವರಿಗೆ ಪ್ರಾಣ ಬೆದರಿಕೆ ಹಾಕಿ ಅಪರಾಧಿಕ ಭಯೋತ್ಪಾದನೆಯನ್ನು ಮಾಡಿದ್ದರಿಂದ 1 ಮತ್ತು 2 ನೇ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ.506 ಹಾಗೂ ಸಹವಾಚಕ ಕಲಂ.34 ರ ಅಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

1 ರಿಂದ 3 ನೇ ಆರೋಪಿತರಾದ ನೀವು ಸದರಿ ಆರೋಪಗಳ ಮೇಲೆ ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

1. 1 ನೇ ಆರೋಪಿಯಾದ ನಿಮಗೆ ಮೇಲ್ಕಂಡ ದೋಷಾರೋಪಣೆ ಓದಿ ಹೇಳಿದ್ದು ನಿಮಗೆ ಅರ್ಥವಾಯಿತೇ?

ಉತ್ತರಃ

2. 1 ನೇ ಆರೋಪಿಯಾದ ನೀವು ನಿಮ್ಮ ಸದರಿ ತಪ್ಪುಗಳನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕಾ?

ಉತ್ತರಃ

1. 2 ನೇ ಆರೋಪಿಯಾದ ನಿಮಗೆ ಮೇಲ್ಕಂಡ ದೋಷಾರೋಪಣೆ ಓದಿ ಹೇಳಿದ್ದು ನಿಮಗೆ ಅರ್ಥವಾಯಿತೇ?

ಉತ್ತರಃ

2. 2 ನೇ ಆರೋಪಿಯಾದ ನೀವು ನಿಮ್ಮ ಸದರಿ ತಪ್ಪುಗಳನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕಾ?

ಉತ್ತರಃ

1. 3 ನೇ ಆರೋಪಿಯಾದ ನಿಮಗೆ ಮೇಲ್ಕಂಡ ದೋಷಾರೋಪಣೆ ಓದಿ ಹೇಳಿದ್ದು ನಿಮಗೆ ಅರ್ಥವಾಯಿತೇ?

ಉತ್ತರಃ

2. 3 ನೇ ಆರೋಪಿಯಾದ ನೀವು ನಿಮ್ಮ ಸದರಿ ತಪ್ಪುಗಳನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕಾ?

ಉತ್ತರಃ

ಸ್ಥಳಃ ಹಗರಿಬೊಮ್ಮನಹಳ್ಳಿ
ದಿನಾಂಕಃ 16-12-2021

ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾದಂ.,
ಹಗರಿಬೊಮ್ಮನಹಳ್ಳಿ .

**1 ನೇ ಆರೋಪಿ ಸಹಿಃ**

**2 ನೇ ಆರೋಪಿ ಸಹಿಃ**

**3 ನೇ ಆರೋಪಿ ಸಹಿಃ**